# ಕರ್ನಾಟಕ ಸರ್ಕಾರ

# ಶಾಲಾ ಶಿಕ್ಷಣ ಇಲಾಖೆ

# 5 ಮತ್ತು 8 ನೇ ತರಗತಿ ಮೌಲ್ಯಾಂಕನ (ಸಂ.ಮೌ–2)

# Assessment for Class 5 and 8 (SA- 2)

## 2022-23


ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು (ರಿ)

Karnataka School Quality Assessment & Accreditation Council (R)

ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03. ದೂರವಾಣಿ ಸಂಖ್ಯೆ: 23341615, 23562283, 29720300

**e-mail:** ksqaacbangalore@gmail.com &ksqaacbangalore@gmail.com

# ಮಂಡಲಿ ಪರಿಚಯ

ನೆಲ್ಸನ್ ಮಂಡೇಲಾ ಹೇಳುವಂತೆ "ಶಿಕ್ಷಣವು ಜಗತ್ತನ್ನು ಬದಲಾಯಿಸುವ ಪ್ರಮುಖ ಅಸ್ತ್ರ". ಈ ಶಿಕ್ಷಣವೆಂಬ ಅಸ್ತ್ರವು ವ್ಯಕ್ತಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಜ್ಞಾನವುಳ್ಳ ನಾಗರೀಕನನ್ನಾಗಿ ಮಾಡುತ್ತದೆ. ಸ್ವಾವಲಂಬಿಯನ್ನಾಗಿ ಮಾಡುತ್ತದೆ. ಅಂತಿಮವಾಗಿ ಕುವೆಂಪುರವರು ಹೇಳಿದಂತೆ ವಿಶ್ವಮಾನವನನ್ನಾಗಿ ಮಾಡುತ್ತದೆ.

ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರೌಢಶಿಕ್ಷಣ ವ್ಯವಸ್ಥೆ ಅತ್ಯಂತ ಮಹತ್ವದ ಘಟ್ಟವಾಗಿದ್ದು, ವಿದ್ಯಾರ್ಥಿಯ ಮುಂದಿನ ಶೈಕ್ಷಣಿಕ ಆಯ್ಕೆಯನ್ನು ನಿರ್ಧರಿಸುವ ಪ್ರಮುಖ ಹಂತದಲ್ಲಿ ಪ್ರೌಢಶಿಕ್ಷಣ ಹಂತದಲ್ಲಿನ ಕಲಿಕೆಯಲ್ಲಿನ ಮೌಲ್ಯಮಾಪನವನ್ನು ಅತ್ಯಂತ ವಸ್ತುನಿಷ್ಠವಾಗಿ, ವಿಶ್ವಾಸನೀಯವಾಗಿ ಮತ್ತು ನಿಖರವಾಗಿ ಕಳೆದ ಒಂದು ಶತಮಾನದಿಂದ ಯಶಸ್ವಿಯಾಗಿ ನಿರ್ವಹಿಸುತ್ತಿರುವುದು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಲಿ.

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ರಾಜ್ಯದ 10ನೇ ತರಗತಿಯ ಪಬ್ಲಿಕ್ ಪರೀಕ್ಷೆಗಳನ್ನು ನಿರ್ವಹಿಸುತ್ತಿದ್ದು, ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳನ್ನು ಒಂದೇ ಮಂಡಳಿಯಿಂದ ನಡೆಸುವ ಉದ್ದೇಶದಿಂದ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯೊಂದಿಗೆ ಪದವಿಪೂರ್ವ ಶಿಕ್ಷಣ ಇಲಾಖೆಯ ಪರೀಕ್ಷಾ ವಿಭಾಗವನ್ನು ವಿಲೀನಗೊಳಿಸಿ ಸರ್ಕಾರದ ಆದೇಶ ಸಂಖ್ಯೆ: ಇಪಿ 66 ಎಸ್ ಎಲ್ ಬಿ 2022 ಬೆಂಗಳೂರು, ದಿನಾಂಕ: 20.10.2022 ರಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ ಎಂಬ ಸಂಸ್ಥೆಯನ್ನು ರಚಿಸಲಾಯಿತು.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ ಎಂದು ರಚನೆಗೊಂಡ ನಂತರ ಕೆ.ಎಸ್.ಇ.ಎ.ಬಿ.ಯ ಅಂಗಸಂಸ್ಥೆಯಾದ ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತಿನ ಮೂಲಕ ಮೊದಲನೇ ಬಾರಿಗೆ 2022–23ನೇ ಸಾಲಿನ SA-2 ಮೌಲ್ಯಾಂಕನಕ್ಕೆ ಬದಲಾಗಿ ಕೇಂದ್ರೀಕೃತ ಪ್ರಶ್ನೋತ್ತರ ಪತ್ರಿಕೆಗಳನ್ನು ಮುದ್ರಣ ಮತ್ತು ಸರಬರಾಜು ಮಾಡುವ ಮೂಲಕ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ 5 ಮತ್ತು 8ನೇ ತರಗತಿ ವಿದ್ಯಾರ್ಥಿಗಳಿಗೆ ಮೌಲ್ಯಾಂಕನವನ್ನು ನಡೆಸಲಾಯಿತು.

# ಮೌಲ್ಯಾಂಕನದ ಹಿನ್ನೆಲೆ

ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರ ಕಛೇರಿ ಸುತ್ತೋಲೆ ಸಂಖ್ಯೆ: E-870867-DPII-PIOC7-2(PLM)/3/2022, ದಿನಾಂಕ: 12.12.2022 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಇಪಿ 89 ಪಿಬಿಎಸ್ 2023, ಬೆಂಗಳೂರು, ದಿನಾಂಕ: 17.02.2023 ರನ್ವಯ 2022–23ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ 5ನೇ ತರಗತಿ ವಿದ್ಯಾರ್ಥಿಗಳಿಗೆ **ದಿನಾಂಕ: 27.03.2023 ರಿಂದ 30.03.2023 ರವರೆಗೆ** ಮತ್ತು 8ನೇ ತರಗತಿ ವಿದ್ಯಾರ್ಥಿಗಳಿಗೆ **ದಿನಾಂಕ: 27.03.2023 ರಿಂದ 01.04.2023 ರವರೆಗೆ** ಮೌಲ್ಯಾಂಕನವನ್ನು ನಡೆಸಲಾಯಿತು.

**ಉದ್ದೇಶಗಳು:–**

- ವಿದ್ಯಾರ್ಥಿಗಳ ಕಲಿಕಾ ಮಟ್ಟ, ಕಲಿಕಾ ನ್ಯೂನ್ಯತೆಗಳು, ಕಲಿಕಾ ಪ್ರಗತಿ ಹಾಗೂ ಯಾವ ವಿಷಯದ ಕಲಿಕೆಯಲ್ಲಿ ಎಷ್ಟು ಹಿನ್ನಡೆಯುಂಟಾಗಿದೆ ಎಂಬುದನ್ನು ತಿಳಿಯುವುದು.
- ವಿದ್ಯಾರ್ಥಿಗಳ ಕಲಿಕೆಯ ಕುರಿತು ವರದಿಯನ್ನು ನೀಡುವುದು(ರಾಜ್ಯ ಮತ್ತು ಜಿಲ್ಲಾ ಹಂತ).
- ಕೋವಿಡ್–19ರ ಪರಿಣಾಮದ ನಂತರ ಪೂರ್ಣಪ್ರಮಾಣದಲ್ಲಿ ಶಾಲೆಗಳು ಆರಂಭವಾಗಿದ್ದು, ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವನ್ನು ತಿಳಿಯುವುದು.
- ವಿವಿಧ ಆಯಾಮಗಳ ಮೂಲಕ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವನ್ನು ಅಳೆಯುವುದು.
- ವಿದ್ಯಾರ್ಥಿಗಳ ಉತ್ತಮ ಕಲಿಕೆಗೆ ಪೂರಕವಾಗಿ ಕಾರ್ಯನಿರ್ವಹಿಸಿರುವ ಅಂಶಗಳ ಬಗ್ಗೆ ತಿಳಿಯುವುದು.
- ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿ ಇಲಾಖೆ ಕೈಗೊಳ್ಳಬೇಕಾದ ಶೈಕ್ಷಣಿಕ ಕಾರ್ಯಕ್ರಮಗಳ ಚೌಕಟ್ಟನ್ನು ನಿಗದಿಪಡಿಸುವುದು.
- ಶಿಕ್ಷಣ ವ್ಯವಸ್ಥೆಯ ವಿವಿಧ ಭಾಗೀದಾರರು ವಿಶೇಷವಾಗಿ ಪೋಷಕರು, ಶಿಕ್ಷಕರು, ಆಡಳಿತಗಾರರಿಗೆ ಕಲಿಕಾ ಗುಣಮಟ್ಟದ ಬಗ್ಗೆ ಜಾಗೃತಿ ಮೂಡಿಸುವುದು. ಆ ಮೂಲಕ ಕಲಿಕಾ ಗುಣಮಟ್ಟ ಉತ್ತಮಪಡಿಸಲು ಇವರನ್ನು ಮತ್ತಷ್ಟು ಪ್ರೇರೇಪಿಸುವುದು.
- ಮೌಲ್ಯಾಂಕನದ ನಂತರ ವಿಶ್ಲೇಷಣೆ ಮಾಡಿ ವಿಷಯವಾರು ಕಲಿಕಾ ಪ್ರಗತಿ ಕುಂಠಿತವಾಗಿರುವುದನ್ನು ವಿಶ್ಲೇಷಿಸಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಅಗತ್ಯ ಕ್ರಿಯಾಯೋಜನೆ ರಚಿಸಿ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಬಲವರ್ಧನೆಗೊಳಿಸುವುದು.

**ಮೌಲ್ಯಾಂಕನಕ್ಕೆ ಒಳಪಟ್ಟ ಶಾಲೆಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ:–**

| ತರಗತಿ | ಶಾಲೆಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 5ನೇ | 56,157 | 9,59,734 |
| 8ನೇ | 22,638 | 9,43,919 |
| **ಒಟ್ಟು** | | **19,03,653** |

**ಮೌಲ್ಯಾಂಕನಕ್ಕೆ ವಿದ್ಯಾರ್ಥಿಗಳ ನೋಂದಣಿ:–**

5 ಮತ್ತು 8ನೇ ತರಗತಿಗೆ ಪ್ರತ್ಯೇಕವಾಗಿ ಯಾವುದೇ ನೋಂದಣಿ ಮಾಡಿಕೊಳ್ಳದೆ ಈಗಾಗಲೇ SATS (Student Achievement Tracking System) ನಲ್ಲಿ ಲಭ್ಯವಿರುವ ವಿದ್ಯಾರ್ಥಿಗಳ ಮಾಹಿತಿಯನ್ನೇ ಪರಿಗಣಿಸಲಾಯಿತು. ಯಾವುದೇ ವಿದ್ಯಾರ್ಥಿಯು ಮೌಲ್ಯಾಂಕನದಿಂದ ವಂಚಿತರಾಗದಂತೆ ಕ್ರಮವಹಿಸಲು ಜಿಲ್ಲಾ ಉಪನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ), ಕ್ಷೇತ್ರಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳಿಗೆ, ಸಿ.ಆರ್.ಪಿ.ಗಳಿಗೆ ಸೂಚಿಸಲಾಗಿತ್ತು.

**ಮೌಲ್ಯಾಂಕನ ಕೇಂದ್ರಗಳ ಸ್ಥಾಪನೆ:–**

ಮೌಲ್ಯಾಂಕನದ ಆರಂಭದಲ್ಲಿ 5ನೇ ತರಗತಿಯ ಕನಿಷ್ಠ 25 ವಿದ್ಯಾರ್ಥಿಗಳಿಗೆ, 8ನೇ ತರಗತಿಯ 50 ವಿದ್ಯಾರ್ಥಿಗಳಿಗೆ ಒಂದು ಪರೀಕ್ಷಾ ಕೇಂದ್ರವನ್ನು ಸೃಜಿಸಲಾಗಿತ್ತು. ಆದರೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಯಾ ಶಾಲೆಗಳನ್ನೇ ಪರೀಕ್ಷಾ ಕೇಂದ್ರಗಳನ್ನಾಗಿ ಪರಿಗಣಿಸಲಾಯಿತು. ಅದರಂತೆ 5 ಮತ್ತು 8ನೇ ತರಗತಿಯನ್ನು ಹೊಂದಿರುವ ಎಲ್ಲಾ ಶಾಲೆಗಳು ಮೌಲ್ಯಾಂಕನ ಕೇಂದ್ರಗಳಾಗಿ ಕಾರ್ಯನಿರ್ವಹಿಸಿದವು.

**ಮೌಲ್ಯಾಂಕನ ಕಾರ್ಯನಿರ್ವಹಣೆ:–**

5 ಮತ್ತು 8ನೇ ತರಗತಿ ಮೌಲ್ಯಾಂಕನ ಕಾರ್ಯನಿರ್ವಹಣೆಗಾಗಿ ಜಿಲ್ಲಾ ಹಂತದಲ್ಲಿ ಡಯಟ್‌ನಿಂದ ಒಬ್ಬರು ಅಧಿಕಾರಿಗಳನ್ನು ಜಿಲ್ಲಾ ನೋಡಲ್ ಅಧಿಕಾರಿಗಳನ್ನಾಗಿ, ತಾಲ್ಲೂಕು ಹಂತದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯಿಂದ ಒಬ್ಬರನ್ನು ತಾಲ್ಲೂಕು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿತ್ತು. ಜಿಲ್ಲಾ ಮತ್ತು ತಾಲ್ಲೂಕು ನೋಡಲ್ ಅಧಿಕಾರಿಗಳು ಮೌಲ್ಯಾಂಕನದ ಸಂಪೂರ್ಣ ಉಸ್ತುವಾರಿಯನ್ನು ವಹಿಸಿಕೊಂಡು ಉತ್ತಮವಾಗಿ ಮೌಲ್ಯಾಂಕನವನ್ನು ನಿರ್ವಹಿಸುವುದು ಅವರ ಜವಾಬ್ದಾರಿಯಾಗಿತ್ತು.

ಎಲ್ಲಾ ಶಾಲೆಗಳನ್ನು ಮೌಲ್ಯಾಂಕನದ ಪರೀಕ್ಷಾ ಕೇಂದ್ರಗಳಾಗಿ ಪರಿಗಣಿಸಿದ್ದರಿಂದ ಆಯಾ ಶಾಲೆಗಳ ಮುಖ್ಯ ಶಿಕ್ಷಕರು/ ಪ್ರಾಂಶುಪಾಲರನ್ನೇ ಕೇಂದ್ರದ ಮುಖ್ಯಸ್ಥರನ್ನಾಗಿ ಮಾಡಲಾಗಿತ್ತು.

ಮೌಲ್ಯಾಂಕನ ಕಾರ್ಯದಲ್ಲಿ ಭಾಗವಹಿಸಿದ್ದ ಎಲ್ಲಾ ಜಿಲ್ಲಾ ಹಂತದ ಮತ್ತು ತಾಲ್ಲೂಕು ಹಂತದ ಅಧಿಕಾರಿಗಳಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾಹಿತಿ ನೀಡಿ ಮೌಲ್ಯಾಂಕನವನ್ನು ಯಶಸ್ವಿಗೊಳಿಸಲು ಸೂಚಿಸಲಾಗಿತ್ತು.

**ಮೌಲ್ಯಾಂಕನದ ವಿಷಯಗಳು:–**

**ಕೋಷ್ಟಕ – 1**

| ತರಗತಿ | ಮೌಲ್ಯಾಂಕನದ ವಿಷಯಗಳು | |
|---|---|---|
| | ಭಾಷೆ | ಕೋರ್ ವಿಷಯ |
| 5ನೇ | ➢ ಪ್ರಥಮ ಭಾಷೆ: ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಮರಾಠಿ, ತಮಿಳು, ತೆಲುಗು.<br>➢ ದ್ವಿತೀಯ ಭಾಷೆ : ಕನ್ನಡ, ಇಂಗ್ಲೀಷ್ | ➢ ಗಣಿತ<br>➢ ಪರಿಸರ ಅಧ್ಯಯನ |
| 8ನೇ | ➢ ಪ್ರಥಮ ಭಾಷೆ: ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಮರಾಠಿ, ತಮಿಳು, ತೆಲುಗು, ಸಂಸ್ಕೃತ, ಇಂಗ್ಲೀಷ್(ಎನ್.ಸಿ.ಇ.ಆರ್.ಟಿ)<br>➢ ದ್ವಿತೀಯ ಭಾಷೆ: ಕನ್ನಡ, ಇಂಗ್ಲೀಷ್<br>➢ ತೃತೀಯ ಭಾಷೆ: ಕನ್ನಡ, ಇಂಗ್ಲೀಷ್, ಹಿಂದಿ, ಹಿಂದಿ(ಎನ್.ಸಿ.ಇ.ಆರ್.ಟಿ), ಉರ್ದು, ಸಂಸ್ಕೃತ, ತುಳು, ಕೊಂಕಣಿ(ಕನ್ನಡ, ದೇವನಾಗರಿ), ಅರೇಬಿಕ್. | ➢ ಗಣಿತ<br>➢ ವಿಜ್ಞಾನ<br>➢ ಸಮಾಜ ವಿಜ್ಞಾನ |

**ಮೌಲ್ಯಾಂಕನಕ್ಕೆ ನಿಗದಿಪಡಿಸಿದ ಪಠ್ಯವಸ್ತು:–**

ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ರವರ ಆದೇಶದಂತೆ 2022–23 ನೇ ಸಾಲಿನ SA-2 (ಸಂಕಲನಾತ್ಮಕ ಮೌಲ್ಯಮಾಪನ–2) ಬದಲಿಗೆ ಮೌಲ್ಯಾಂಕನ ನಡೆಸಿದ್ದರಿಂದ ನವೆಂಬರ್–2022 ರಿಂದ ಮಾರ್ಚ್–2023 ರ ಮೊದಲನೇ ವಾರದವರೆಗಿನ ಪಠ್ಯವಸ್ತುವನ್ನು ಮೌಲ್ಯಾಂಕನಕ್ಕೆ ಪರಿಗಣಿಸಲಾಗಿತ್ತು.

**ಮೌಲ್ಯಾಂಕನಕ್ಕೆ ನಿಗದಿಪಡಿಸಿದ ಪ್ರಶ್ನೆಗಳು ಮತ್ತು ಅಂಕಗಳು:–**

ಮೌಖಿಕ ಮತ್ತು ಲಿಖಿತ ಮೌಲ್ಯಾಂಕನವನ್ನು ಒಟ್ಟು 50 ಅಂಕಗಳಿಗೆ ನಡೆಸಲಾಯಿತು. ಸದರಿ 50 ಅಂಕಗಳಿಗೆ ವಿದ್ಯಾರ್ಥಿಗಳು ಗಳಿಸಿರುವ ಅಂಕಗಳನ್ನು 20 ಅಂಕಗಳಿಗೆ ಪರಿವರ್ತಿಸಿ, ಈ ಮೊದಲೇ 04 ರೂಪಣಾತ್ಮಕ ಮೌಲ್ಯಮಾಪನ(FA) ಮತ್ತು ಸಂಕಲನಾತ್ಮಕ ಮಾಲ್ಯಮಾಪನ–1(SA) ರಲ್ಲಿ ವಿದ್ಯಾರ್ಥಿಗಳು ಗಳಿಸಿರುವ ಅಂಕಗಳಿಗೆ ಸೇರಿಸಿ, ಕ್ರೂಢೀಕರಿಸಿ ಫಲಿತಾಂಶವನ್ನು ಶಾಲಾ ಹಂತದಲ್ಲಿ ನೀಡಲಾಯಿತು.

ಮೌಖಿಕ ಮಾಲ್ಯಾಂಕನಕ್ಕೆ 10 ಅಂಕಗಳನ್ನು ನಿಗದಿಪಡಿಸಿ ಶಾಲಾ ಹಂತದಲ್ಲಿಯೇ ಪ್ರಶ್ನೆಪತ್ರಿಕೆಗಳನ್ನು ಸಿದ್ದಪಡಿಸಿ ಶಿಕ್ಷಕರಿಂದಲೆ ಮೌಲ್ಯಾಂಕನವನ್ನು ನಿರ್ವಹಿಸಲಾಯಿತು. ಲಿಖಿತ ಮೌಲ್ಯಾಂಕನಕ್ಕೆ 40 ಅಂಕಗಳನ್ನು ನಿಗದಿಪಡಿಸಿ, ರಾಜ್ಯ ಹಂತದಿಂದ ಪ್ರಶ್ನೋತ್ತರ ಪತ್ರಿಕೆಗಳನ್ನು ಸಿದ್ಧಪಡಿಸಿ ಅದೇ ಕ್ಲಸ್ಟರ್‌ನ ಬೇರೆ ಶಾಲೆಯ ಶಿಕ್ಷಕರನ್ನು ಕೊಠಡಿ ಮೇಲ್ವಿಚಾರಕರನ್ನಾಗಿ ನೇಮಿಸಿ ಮೌಲ್ಯಾಂಕನವನ್ನು ನಡೆಸಲಾಯಿತು.

ಪ್ರಶ್ನೋತ್ತರ ಪತ್ರಿಕೆಗಳು ಒಂದು ಅಂಕದ 20 ಬಹುಆಯ್ಕೆ ಮಾದರಿ ಪ್ರಶ್ನೆಗಳು (MCQ), 02 ಅಂಕದ 05 ವಿವರಣಾತ್ಮಕ ಪ್ರಶ್ನೆಗಳು, 03 ಅಂಕದ 02 ವಿವರಣಾತ್ಮಕ ಪ್ರಶ್ನೆಗಳು ಮತ್ತು 04 ಅಂಕದ 01 ವಿವರಣಾತ್ಮಕ ಪ್ರಶ್ನೆ ಸೇರಿದಂತೆ ಒಟ್ಟು 40 ಅಂಕಗಳ 28 ಪ್ರಶ್ನೆಗಳನ್ನು ಒಳಗೊಂಡಿತ್ತು. ಈ ಮೌಲ್ಯಾಂಕನದಲ್ಲಿ ಎಲ್ಲಾ ವಿಧದ ಶಾಲೆಗಳು ಭಾಗವಹಿಸಿದ್ದರಿಂದ ಎಲ್ಲಾ ವಿದ್ಯಾರ್ಥಿಗಳು ಉತ್ತರಿಸಲು ಹೆಚ್ಚು ಅವಕಾಶ ದೊರೆಯುವಂತೆ ವಿಶೇಷವಾಗಿ ಕೋರ್ ವಿಷಯಗಳಲ್ಲಿನ 08 ವಿವರಣಾತ್ಮಕ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಪರ್ಯಾಯವಾಗಿ ಮತ್ತೊಂದು ಪ್ರಶ್ನೆಯನ್ನು ನೀಡಿ ಉತ್ತರಿಸಲು ಅವಕಾಶ ನೀಡಲಾಗಿತ್ತು.

**ಪ್ರಶ್ನೆಗಳು ಮತ್ತು ಅಂಕಗಳ ಒಟ್ಟಾರೆ ವಿತರಣೆ**

**ಕೋಷ್ಟಕ – 2**

| ತರಗತಿ | ಪ್ರಶ್ನೆಗಳ ಸಂಖ್ಯೆ | | | ಪ್ರತಿ ಪ್ರಶ್ನೆಗೆ ಅಂಕಗಳು | | | ಒಟ್ಟು ಅಂಕ | | |
|---|---|---|---|---|---|---|---|---|---|
| | ಬಹು ಆಯ್ಕೆ | ವಿವರಣಾತ್ಮಕ | ಒಟ್ಟು | ಬಹು ಆಯ್ಕೆ | ವಿವರಣಾತ್ಮಕ | ಒಟ್ಟು | ಬಹು ಆಯ್ಕೆ | ವಿವರಣಾತ್ಮಕ | ಒಟ್ಟು |
| 5ನೇ | 20 (ಪ್ರತಿ ವಿಷಯಕ್ಕೆ) | 8 (ಪ್ರತಿ ವಿಷಯಕ್ಕೆ) | 28 | 1 (ಪ್ರತಿ ಪ್ರಶ್ನೆಗೆ) | 2 (ಪ್ರ.ಸಂ.21 ರಿಂದ 25)<br>3 (ಪ್ರ.ಸಂ.26 ಮತ್ತು 27)<br>4 (ಪ್ರ.ಸಂ.28) | 40 | 20 | 20 | 40 |
| 8ನೇ | 20 (ಪ್ರತಿ ವಿಷಯಕ್ಕೆ) | 8 (ಪ್ರತಿ ವಿಷಯಕ್ಕೆ) | 28 | 1 (ಪ್ರತಿ ಪ್ರಶ್ನೆಗೆ) | 2 (ಪ್ರ.ಸಂ.21 ರಿಂದ 25)<br>3 (ಪ್ರ.ಸಂ.26 ಮತ್ತು 27)<br>4 (ಪ್ರ.ಸಂ.28) | 40 | 20 | 20 | 40 |

**ಪ್ರಶ್ನೋತ್ತರ ಪತ್ರಿಕೆಗಳ ವಿನ್ಯಾಸ:–**

2022–23 ನೇ ಸಾಲಿನ ಕಲಿಕಾ ಸಾಧನಾ ಸಮೀಕ್ಷೆಗೆ ಉತ್ತಮ ಗುಣಮಟ್ಟದ ಪ್ರಶ್ನೋತ್ತರ ಪತ್ರಿಕೆಗಳನ್ನು ಈ ಕೆಳಕಂಡ ಅಂಶಗಳನ್ನಾಧರಿಸಿ ವಿನ್ಯಾಸಗೊಳಿಸಲಾಗಿದೆ.

- ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಕಲಿಕಾ ಸಾಮರ್ಥ್ಯಗಳನ್ನು ಸಿದ್ಧಪಡಿಸಿ ಅವುಗಳಿಗೆ ಪ್ರಶ್ನೆಗಳ ರಚನೆ ಮಾಡಲಾಯಿತು.
- ಉದ್ದಿಷ್ಟ ಹಾಗೂ ಕಠಿಣತೆಯ ಮಟ್ಟವನ್ನಾಧರಿಸಿ ಶೇಕಡಾವಾರು ಅಂಕಗಳು ಹಾಗೂ ಪ್ರಶ್ನೆಗಳನ್ನು ಹಂಚಿಕೆ ಮಾಡಲಾಯಿತು.
- ವಿಷಯವಾರು ಮತ್ತು ಘಟಕವಾರು ಪ್ರಶ್ನೆಗಳ ಸೂಕ್ತ ಹಂಚಿಕೆ.
- ಬಹುಆಯ್ಕೆ ಪ್ರಶ್ನೆಗಳಿಗೆ ಉತ್ತಮ ಗುಣಮಟ್ಟದ ಆಯ್ಕೆಗಳು (Distractors for MCQ questions).
- ವಿವರಣಾತ್ಮಕ ಪ್ರಶ್ನೆಗಳಿಗೆ ಸೂಕ್ತ ರೀತಿಯಲ್ಲಿ ಅಂಕ ಹಂಚಿಕೆ.
- ವಿವರಣಾತ್ಮಕ ಪ್ರಶ್ನೆಗಳಿಗೆ ಉತ್ತರಿಸಲು ಅಗತ್ಯ ಸ್ಥಳಾವಕಾಶದ ಲಭ್ಯತೆ.

**ಮೌಲ್ಯಾಂಕನಕ್ಕೆ ಸಂಬಂಧಿಸಿದ ಸಾಮಗ್ರಿಗಳ ಮುದ್ರಣ ಮತ್ತು ಸರಬರಾಜು:–**

5 ಮತ್ತು 8ನೇ ತರಗತಿ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಎಲ್ಲಾ ಪ್ರಶ್ನೋತ್ತರ ಪತ್ರಿಕೆಗಳನ್ನು ರಾಜ್ಯ ಹಂತದಲ್ಲಿ ಮುದ್ರಿಸಿ ಬ್ಲಾಕ್ ಹಂತಕ್ಕೆ ತರಗತಿವಾರು, ವಿಷಯವಾರು, ಮಾಧ್ಯಮವಾರು, ಕ್ಲಸ್ಟರ್‌ವಾರು ಪ್ಯಾಕ್ ಮಾಡಿ ಸರಬರಾಜು ಮಾಡಲಾಯಿತು. ಬ್ಲಾಕ್ ಹಂತದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳು ಪ್ರಶ್ನೋತ್ತರ ಪತ್ರಿಕೆಗಳನ್ನು ಸ್ವೀಕರಿಸಿದ ನಂತರ ಸೂಕ್ತ ಭದ್ರತಾ ವ್ಯವಸ್ಥೆಯಿರುವ ಕೊಠಡಿಗಳಲ್ಲಿ ಸಂಗ್ರಹಿಸಿದ್ದರು. ಮೌಲ್ಯಾಂಕನವು ಮಧ್ಯಾಹ್ನದ ಅವಧಿಯಲ್ಲಿ ನಡೆದಿದ್ದರಿಂದ ಪ್ರತಿ ದಿನ ಸಿ.ಆರ್.ಪಿ.ಗಳ ಮೂಲಕ ಸಂಬಂಧಿಸಿದ ಶಾಲೆಗಳಿಗೆ ತಲುಪಿಸುವುದು ಕ್ಷೇತ್ರಶಿಕ್ಷಣಾಧಿಕಾರಿಗಳ ಜವಾಬ್ದಾರಿಯಾಗಿತ್ತು.

**ವ್ಯಾಪಕ ಪ್ರಚಾರ:–**

ಘನ ಉಚ್ಚ ನ್ಯಾಯಾಲಯವು 2022–23ನೇ ಸಾಲಿನ 5 ಮತ್ತು 8ನೇ ತರಗತಿಗಳ ಮೌಲ್ಯಾಂಕನದಲ್ಲಿ ಯಾವುದೇ ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸುತ್ತಿಲ್ಲ ಎಂಬ ವಿಷಯವನ್ನು ವ್ಯಾಪಕ ಪ್ರಚಾರ ಮಾಡಲು ತಿಳಿಸಿದ್ದರಿಂದ ದಿನಾಂಕ: 19.03.2023 ರಂದು ರಾಜ್ಯಾದ್ಯಂತ ಪ್ರಕಟವಾದ ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳಲ್ಲಿ 5 ಮತ್ತು 8ನೇ ತರಗತಿ ಮೌಲ್ಯಾಂಕನದಲ್ಲಿ ಯಾವುದೇ ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸುತ್ತಿಲ್ಲ ಮತ್ತು ಈ ಮೌಲ್ಯಾಂಕನದ ಫಲಿತಾಂಶವನ್ನು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಮಾತ್ರ ತಿಳಿಸಲಾಗುವುದು ಎಂಬ ಅಂಶವನ್ನು ವ್ಯಾಪಕವಾಗಿ ಪ್ರಚುರ ಪಡಿಸಲಾಯಿತು. ಇದರ ಜೊತೆಗೆ ಜಿಲ್ಲಾ ಹಾಗೂ ತಾಲ್ಲೂಕು ಹಂತದ ಸ್ಥಳೀಯ ಪತ್ರಿಕೆ/ ಮಾಧ್ಯಮಗಳಲ್ಲಿ 5 ಮತ್ತು 8ನೇ ತರಗತಿಯ ಮೌಲ್ಯಾಂಕನದಲ್ಲಿ ಯಾವುದೇ ವಿದ್ಯಾರ್ಥಿಯನ್ನು ಅನುತ್ತೀರ್ಣಗೊಳಿಸುವುದಿಲ್ಲ ಈ ಮೌಲ್ಯಾಂಕನದ ಫಲಿತಾಂಶವನ್ನು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಮಾತ್ರ ತಿಳಿಸಲಾಗುವುದು ಎಂಬ ಅಂಶವನ್ನು ಸ್ಪಷ್ಟಪಡಿಸಲು ತಿಳಿಸಲಾಗಿತ್ತು. ಅದರಂತೆ ಜಿಲ್ಲಾ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ), ಕ್ಷೇತ್ರಶಿಕ್ಷಣಾಧಿಕಾರಿಗಳು ಸ್ಥಳೀಯ ಮಟ್ಟದಲ್ಲಿ ಈ ಮೇಲಿನ ಅಂಶಗಳುಳ್ಳ ಮಾಹಿತಿಯನ್ನು ವ್ಯಾಪಕವಾಗಿ ಪ್ರಚಾರ ಮಾಡಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ

## ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು

ಕೆ.ಎಸ್.ಇ.ಎ.ಬಿ. 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03. ದೂರವಾಣಿ ಸಂಖ್ಯೆ: 23341615, 23562283, 29720300, e-mail: ksqaacbangalore@gmail.com & ksqaacbengaluru@gmail.com

ಸಂಖ್ಯೆ: K1/KSQAAC/5ನೇ ಮತ್ತು 8ನೇ ಮೌ/05/2022-23 ದಿನಾಂಕ: 18.03.2023

### ಸಾರ್ವಜನಿಕ ಪ್ರಕಟಣೆ

### 5ನೇ ಮತ್ತು 8ನೇ ತರಗತಿಯ ಮೌಲ್ಯಾಂಕನ ಕುರಿತು ಪ್ರಕಟಣೆ

- 5ನೇ ಮತ್ತು 8ನೇ ತರಗತಿಯ ಮೌಲ್ಯಾಂಕನದಲ್ಲಿ ಯಾವುದೇ ವಿದ್ಯಾರ್ಥಿಯನ್ನು ಅನುತ್ತೀರ್ಣಗೊಳಿಸುವುದಿಲ್ಲ, ಎಲ್ಲಾ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ತೇರ್ಗಡೆಗೊಳಿಸಲಾಗುವುದು.
- 5ನೇ ಮತ್ತು 8ನೇ ತರಗತಿಯ ಮೌಲ್ಯಾಂಕನವು ವಾರ್ಷಿಕ ಪರೀಕ್ಷೆಯಾಗಿರುವುದಿಲ್ಲ. ಇದು ಕೇವಲ ಮೌಲ್ಯಾಂಕನವಾಗಿರುತ್ತದೆ.
- ಈ ಮೌಲ್ಯಾಂಕನದ ಮೂಲಕ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ, ಕಲಿಕಾ ನ್ಯೂನ್ಯತೆ, ಕಲಿಕಾ ಪ್ರಗತಿಗಳನ್ನು ತಿಳಿದುಕೊಂಡು ಮುಂದಿನ ಶೈಕ್ಷಣಿಕ ವರ್ಷಕ್ಕೆ ಕಲಿಕಾ ಕೊರತೆಯನ್ನು ನೀಗಿಸಲು ಶೈಕ್ಷಣಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ಇದರ ಉದ್ದೇಶವಾಗಿದೆ ಎಂಬುದನ್ನು ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ತಿಳಿಸಲಾಗಿದೆ.
- ಈ ಮೌಲ್ಯಾಂಕನದ ಫಲಿತಾಂಶವನ್ನು ಸಂಬಂಧಿಸಿದ ಪೋಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಮಾತ್ರ ತಿಳಿಸಲಾಗುವುದು. ಆ ಮೂಲಕ ಫಲಿತಾಂಶದ ಗೌಪ್ಯತೆಯನ್ನು ಕಾಪಾಡಲಾಗುವುದು.
- ಪಠ್ಯಪುಸ್ತಕವನ್ನಾಧರಿಸಿ ಮೌಲ್ಯಾಂಕನಕ್ಕೆ ಪ್ರಶ್ನೆಗಳನ್ನು ಸಿದ್ಧಪಡಿಸಲಾಗಿದೆ.

ಸಹಿ/- ಅಧ್ಯಕ್ಷರು, ಕೆ.ಎಸ್.ಇ.ಎ.ಬಿ.

ಪತ್ರಿಕೆ:
ವಿಜಯವಾಣಿ
ದಿನಾಂಕ:
19.03.2023

## Department of Public Instruction
## Karnataka School Quality Assessment and Accreditation Council

KSEAB, 6th Cross, Malleshwaram, Bengaluru-560 003. Ph: 080-23341615, 23562283, 29720300, e-mail: ksqaacbangalore@gmail.com & ksqaacbengaluru@gmail.com

No: K1/KSQAAC/5th & 8th Assessment/05/2022-23 Date: 18.03.2023

### PUBLIC NOTICE
### Class 5th & 8th Assessment related note

- Class 5th & 8th Assessment does not entail detention of any student in the same class, all the students will be promoted to the next class. The failure will be totally Nil.
- Class 5th & 8th Assessment is not an annual examination. It is just an assessment.
- The students and parents are informed that the objective of this assessment is to know the students learning deficiencies, learning progress and to carry out educational programmes to eliminate the learning deficiency in the next academic year.
- The result of this assessment will be communicated only to the concerned parents and students. Thereby the confidentiality of the result will be maintained.
- The questions framed for the assessment are derived from the Textbook.

Sd/- Chairperson, KSEAB

ಪತ್ರಿಕೆ:
The Times of India
ದಿನಾಂಕ:
19.03.2023

**ಮೌಲ್ಯಾಂಕನ ಕಾರ್ಯ:–**

ಘನ ಉಚ್ಛ ನ್ಯಾಯಾಲಯದ ಆದೇಶದಂತೆ 2022–23ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ 5 ನೇ ತರಗತಿ ವಿದ್ಯಾರ್ಥಿಗಳಿಗೆ **ದಿನಾಂಕ: 27.03.2023 ರಿಂದ 30.03.2023 ರವರೆಗೆ** ಮತ್ತು 8 ನೇ ತರಗತಿ ವಿದ್ಯಾರ್ಥಿಗಳಿಗೆ **ದಿನಾಂಕ: 27.03.2023 ರಿಂದ 01.04.2023 ರವರೆಗೆ** ಮೌಲ್ಯಾಂಕನವನ್ನು ನಡೆಸಲಾಯಿತು. ಪ್ರತಿ ಶಾಲೆಗಳಿಗೆ ಕೊಠಡಿ ಮೇಲ್ವಿಚಾರಕರನ್ನಾಗಿ ಅದೇ ಕ್ಲಸ್ಟರ್‌ನ ಬೇರೆ ಶಾಲೆಯ ಶಿಕ್ಷಕರನ್ನು ನಿಯೋಜಿಸಲಾಗಿತ್ತು.

**ಉತ್ತರ ಹಾಳೆಗಳ ಮೌಲ್ಯಮಾಪನ ಕಾರ್ಯ:–**

ಪ್ರತಿ ಬ್ಲಾಕ್‌ನಲ್ಲಿ 5 ಮತ್ತು 8ನೇ ತರಗತಿಗೆ ಪ್ರತ್ಯೇಕವಾದ ಮೌಲ್ಯಮಾಪನ ಕೇಂದ್ರಗಳನ್ನು ಸಂಬಂಧಿಸಿದ ಕ್ಷೇತ್ರಶಿಕ್ಷಣಾದಿಕಾರಿಗಳು ಗುರುತಿಸಿಕೊಂಡಿದ್ದರು. ಪ್ರತಿ ದಿನ ಮೌಲ್ಯಾಂಕನ ಮುಗಿದ ನಂತರ ಸಂಬಂಧಿಸಿದ ಸಿ.ಆರ್.ಪಿ.ಗಳು ಉತ್ತರಿಸಿದ ಪ್ರಶ್ನೋತ್ತರ ಪತ್ರಿಕೆಗಳನ್ನು ನಿಗದಿಪಡಿಸಿದ ಮೌಲ್ಯಮಾಪನ ಕೇಂದ್ರಗಳಿಗೆ ತಲುಪಿಸುವ ಜವಾಬ್ದಾರಿಯನ್ನು ನಿರ್ವಹಿಸಿದರು.

5ನೇ ತರಗತಿಯ ಮೌಲ್ಯಮಾಪನದ ಜವಾಬ್ದಾರಿಯನ್ನು ಸಂಬಂಧಿಸಿದ ಬ್ಲಾಕ್‌ನ ಬಿ.ಆರ್.ಸಿ.ಗಳಿಗೆ ವಹಿಸಲಾಗಿತ್ತು. 8ನೇ ತರಗತಿಯ ಮೌಲ್ಯಮಾಪನದ ಜವಾಬ್ದಾರಿಯನ್ನು ಜಿಲ್ಲಾ ಡಯಟ್‌ನ ಉಪನ್ಯಾಸಕರಿಗೆ ವಹಿಸಲಾಗಿತ್ತು.

ಮೌಲ್ಯಮಾಪನ ಕಾರ್ಯಕ್ಕೆ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಶಿಕ್ಷಕರನ್ನು, ಕೊರತೆಯಾದಲ್ಲಿ ಅನುದಾನರಹಿತ ಶಾಲಾ ಶಿಕ್ಷಕರನ್ನು ಬಳಸಿಕೊಳ್ಳಲು ಸೂಚಿಸಲಾಗಿತ್ತು. ಪ್ರಶ್ನೋತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಅಂತರ್ ಕ್ಲಸ್ಟರ್‌ವಾರು ಉತ್ತರ ಪತ್ರಿಕೆಗಳನ್ನು ನೀಡಿ ಮೌಲ್ಯಮಾಪನ ಕಾರ್ಯವನ್ನು ನಡೆಸಲಾಯಿತು. ಏಕಕಾಲದಲ್ಲಿ ಎಲ್ಲಾ ವಿಷಯಗಳಿಗೆ ವಿಷಯವಾರು ಪ್ರತ್ಯೇಕ ಕೊಠಡಿಯಲ್ಲಿ ಮೌಲ್ಯಮಾಪನ ಕಾರ್ಯ ಪ್ರಾರಂಭಿಸಿ 3 ರಿಂದ 5 ದಿನಗಳ ಒಳಗಾಗಿ ಮೌಲ್ಯಮಾಪನ ಕಾರ್ಯ ಪೂರ್ಣಗೊಳಿಸಲಾಯಿತು.

**ಫಲಿತಾಂಶ ಪ್ರಕಟಣೆ:–**

ಮೌಲ್ಯಮಾಪನ ಕಾರ್ಯ ಪೂರ್ಣಗೊಂಡ ನಂತರ ಉತ್ತರ ಪತ್ರಿಕೆಗಳನ್ನು ಸಂಬಂಧಿಸಿದ ಶಾಲೆಗೆ ತಲುಪಿಸಲಾಯಿತು. ಶಾಲಾ ಮುಖ್ಯ ಶಿಕ್ಷಕರು ಲಿಖಿತ ಮೌಲ್ಯಾಂಕನದಲ್ಲಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಮೌಖಿಕ ಮೌಲ್ಯಾಂಕನದಲ್ಲಿ ಪಡೆದ ಅಂಕಗಳೊಂದಿಗೆ ಕ್ರೋಢೀಕರಿಸಿ ಗ್ರೇಡ್‌ಗಳಾಗಿ ಪರಿವರ್ತಿಸಿ SATS ನಲ್ಲಿ ನಮೂದಿಸಿರುತ್ತಾರೆ. ವಿದ್ಯಾರ್ಥಿಗಳ ಫಲಿತಾಂಶದ ಮಾಹಿತಿಯನ್ನು ವಿದ್ಯಾರ್ಥಿಗಳು ಮತ್ತು ಅವರ ಪೋಷಕರಿಗೆ ಮಾತ್ರ ತಿಳಿಸಲು ಸೂಚಿಸಲಾಗಿತ್ತು. ಸರ್ಕಾರಿ ಶಾಲೆಗಳಲ್ಲಿ ಸಮುದಾಯದತ್ತ ಶಾಲಾ ದಿನದಂದು ಫಲಿತಾಂಶವನ್ನು ಪ್ರಕಟಿಸಲಾಯಿತು.

**ಫಲಿತಾಂಶ ವಿಶ್ಲೇಷಣೆ:–**

2022–23ನೇ ಸಾಲಿನ 5 ಮತ್ತು 8ನೇ ತರಗತಿ ಮೌಲ್ಯಾಂಕನದ ಫಲಿತಾಂಶ ಪ್ರಕಟಗೊಂಡ ನಂತರ ವಿವಿಧ ಆಯಾಮಗಳಲ್ಲಿ ತರಗತಿಗಳಿಗೆ ನಿಗದಿಪಡಿಸಿರುವ ನಿರ್ದಿಷ್ಟ ಕಲಿಕಾ ಫಲಗಳನ್ನು ವಿದ್ಯಾರ್ಥಿಯು ಗಳಿಸಿದ್ದಾನೆಯೇ? ಇತ್ಯಾದಿ ಅಂಶಗಳ ಆಧಾರದ ಮೇಲೆ ಫಲಿತಾಂಶ ವಿಶ್ಲೇಷಣೆಗೆ ಒಳಪಡಿಸಲಾಯಿತು.

**ಫಲಿತಾಂಶ ವಿಶ್ಲೇಷಣೆ ಉದ್ದೇಶಗಳು:–**

- ವಿದ್ಯಾರ್ಥಿಗಳ ಕಲಿಕಾ ಮಟ್ಟ, ಕಲಿಕಾ ನ್ಯೂನ್ಯತೆಗಳು, ಕಲಿಕಾ ಪ್ರಗತಿ ಹಾಗೂ ಯಾವ ವಿಷಯದಲ್ಲಿ ಹಿಂದುಳಿದಿದ್ದಾರೆ ಎಂಬುದನ್ನು ತಿಳಿಯುವುದು.
- ವಿಷಯವಾರು ಕಲಿಕಾ ಪ್ರಗತಿಯನ್ನು ವಿಶ್ಲೇಷಿಸಿ ಶೈಕ್ಷಣಿಕ ವರ್ಷಕ್ಕೆ ಅಗತ್ಯವಾದ ಕ್ರಿಯಾಯೋಜನೆಗಳನ್ನು ರೂಪಿಸುವುದು.
- ವಿದ್ಯಾರ್ಥಿಗಳ ಕಲಿಕೆಯ ಕುರತ ರಾಜ್ಯ ಮತ್ತು ಜಿಲ್ಲಾ ವರದಿ (ಆಯ್ದ) ನೀಡುವುದು.

**ವಿಶ್ಲೇಷಣೆಗಾಗಿ ಶಾಲೆಗಳ ಆಯ್ಕೆ:–**

2022–23ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ 5ನೇ ತರಗತಿಯ 56,157 ಶಾಲೆಗಳ 9,59,734 ವಿದ್ಯಾರ್ಥಿಗಳು ಹಾಗೂ 8ನೇ ತರಗತಿಯ 22,638 ಶಾಲೆಗಳ 9,43,919 ವಿದ್ಯಾರ್ಥಿಗಳನ್ನು ಮೌಲ್ಯಾಂಕನಕ್ಕೆ ಒಳಪಡಿಸಲಾಗಿತ್ತು. ಈ ವಿದ್ಯಾರ್ಥಿಗಳಲ್ಲಿ ವಿಶ್ಲೇಷಣೆಗೊಳಪಡಿಸುವ ಉದ್ದೇಶದಿಂದ 5ನೇ ತರಗತಿಯ 56,157 ಶಾಲೆಗಳ ಪೈಕಿ 5689 ಶಾಲೆಗಳ 80945 ವಿದ್ಯಾರ್ಥಿಗಳು ಮತ್ತು 8ನೇ ತರಗತಿಯ 22,638 ಶಾಲೆಗಳ ಪೈಕಿ 2582 ಶಾಲೆಗಳ 82388 ವಿದ್ಯಾರ್ಥಿಗಳ ಫಲಿತಾಂಶವನ್ನು ವಿಶ್ಲೇಷಣೆಗೊಳಪಡಿಸಲಾಯಿತು.

ಶಾಲೆಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ 35 ಶೈಕ್ಷಣಿಕ ಜಿಲ್ಲೆಗಳ ಎಲ್ಲಾ ಬ್ಲಾಕುಗಳನ್ನು ಒಳಗೊಂಡಂತೆ ಶಾಲೆಗಳನ್ನು ಆಯ್ಕೆ ಮಾಡಲಾಯಿತು. ಗ್ರಾಮೀಣ ಮತ್ತು ನಗರ, ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳು, ಬಾಲಕರು ಮತ್ತು ಬಾಲಕಿಯರು, ಎಲ್ಲಾ ಮಾಧ್ಯಮ ಮತ್ತು ವರ್ಗದ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಶಾಲೆಗಳನ್ನು ಮತ್ತು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಯಿತು. ಶಾಲೆಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಯಾವುದೇ ಪೂರ್ವಾಗ್ರಹಗಳಿಲ್ಲದೆ (without bios) ಸರಳ ಯಾದೃಚಿಕ ಮಾದರಿ (Simple Random Sampling) ವಿಧಾನದ ಮೂಲಕ ಆಯ್ಕೆ ಮಾಡಲಾಯಿತು. ಶಾಲೆಗಳನ್ನು ಆಯ್ಕೆ ಮಾಡುವ ಈ ಪ್ರಕ್ರಿಯೆಗೆ ಶಿಕ್ಷಣ ಪೌಂಡೇಶನ್ ಸಹಕಾರ ಪಡೆದು ಯಾವುದೇ ಗೊಂದಲಗಳಿಲ್ಲದಂತೆ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಲಾಯಿತು.

**ದತ್ತಾಂಶ ಸಂಗ್ರಹಣೆ:–**

ಎಲ್ಲಾ ಜಿಲ್ಲೆಗಳ ಎಲ್ಲಾ ಬ್ಲಾಕುಗಳನ್ನೊಳಗೊಂಡಂತೆ ಶಾಲೆಗಳನ್ನು ಆಯ್ಕೆ ಮಾಡಿದ್ದು, ಉಪನಿರ್ದೇಶಕರು(ಅಭಿವೃದ್ಧಿ) ಮತ್ತು ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಆಯ್ಕೆಯಾದ ಶಾಲೆಗಳ ದತ್ತಾಂಶವನ್ನು ಸಂಗ್ರಹಿಸುವ ಜವಾಬ್ದಾರಿ ವಹಿಸಲಾಗಿತ್ತು. ಈ ದತ್ತಾಂಶವನ್ನು ಸಂಗ್ರಹಿಸುವಾಗ ಅನುಸರಿಸಬೇಕಾದ ಕ್ರಮಗಳು, ದತ್ತಾಂಶ ಸಂಗ್ರಹಣೆಯ ನಮೂನೆ, ದತ್ತಾಂಶ ಸಂಗ್ರಹಣೆಯ ನಂತರ ದತ್ತಾಂಶವನ್ನು ರಾಜ್ಯ ಕಛೇರಿಗೆ ಕಳುಹಿಸುವ ಬಗೆ, ಇತ್ಯಾದಿ ಎಲ್ಲಾ ಅಂಶಗಳ ಕುರಿತು ಮಾಹಿತಿಯನ್ನು ವಿಡಿಯೋ ಕಾನ್ಫರೆನ್ಸ್ ಮುಖಾಂತರ ನೀಡಲಾಯಿತು.

ನಂತರದಲ್ಲಿ ಜಿಲ್ಲಾ ಹಂತದಿಂದ ಬ್ಲಾಕ್ ಹಂತದಲ್ಲಿ ಬಿ.ಇ.ಒ, ಬಿ.ಆರ್.ಸಿ ವಿಶ್ಲೇಷಣೆ ಆಯ್ಕೆಯಾದ ಶಾಲೆಗಳ ಮುಖ್ಯಶಿಕ್ಷಕರಿಗೆ ಉಪನಿರ್ದೇಶಕರು (ಅಭಿವೃದ್ಧಿ) ರವರು ಮಾಹಿತಿ ನೀಡಿ ನಿಗದಿತ ನಮೂನೆಯಲ್ಲಿ ವಿದ್ಯಾರ್ಥಿವಾರು, ವಿಷಯವಾರು ಮಾಹಿತಿ ನೀಡುವಂತೆ ತಿಳಿಸಿದರು.

ಬ್ಲಾಕ್ ನೋಡಲ್ ಅಧಿಕಾರಿಗಳು ಬ್ಲಾಕ್ ಹಂತದಲ್ಲಿ ವಿಶ್ಲೇಷಣೆಗೆ ಆಯ್ಕೆ ಮಾಡಲಾದ ಶಾಲೆಗಳ ಮುಖ್ಯಶಿಕ್ಷಕರಿಂದ ನಿಗದಿತ ನಮೂನೆಯಲ್ಲಿ (Soft copy) ಮಾಹಿತಿ ಪಡೆದು, ಎಲ್ಲಾ ವಿದ್ಯಾರ್ಥಿಗಳ ಮಾಹಿತಿಯನ್ನು ಕ್ರೋಢೀಕರಿಸಿ ಜಿಲ್ಲಾ ಹಂತಕ್ಕೆ ಕಳುಹಿಸಿದರು. ನಂತರ ಜಿಲ್ಲಾ ಹಂತದಲ್ಲಿ ಜಿಲ್ಲೆಯ ಎಲ್ಲಾ ಬ್ಲಾಕುಗಳಿಂದ ಸಂಗ್ರಹಿಸಿದ ವಿದ್ಯಾರ್ಥಿವಾರು, ವಿಷಯವಾರು ಮಾಹಿತಿಯನ್ನು ರಾಜ್ಯ ಹಂತಕ್ಕೆ ಕಳುಹಿಸಿದರು.

ವಿದ್ಯಾರ್ಥಿವಾರು, ವಿಷಯವಾರು ಶಾಲಾ ಹಂತದಿಂದ ಬಂದ ಮಾಹಿತಿಯನ್ನು ಬ್ಲಾಕ್ ಹಂತದಲ್ಲಿ ಮತ್ತು ಜಿಲ್ಲಾ ಹಂತದಲ್ಲಿ ಸರಿಯಾಗಿ ಪರಿಶೀಲಿಸದೆ ಯಥಾವತ್ತಾಗಿ ರಾಜ್ಯ ಹಂತಕ್ಕೆ ಕಳುಹಿಸಿದ್ದರಿಂದ ದತ್ತಾಂಶಗಳಲ್ಲಿ ಬಹಳಷ್ಟು ವ್ಯತ್ಯಾಸಗಳು ಕಂಡುಬಂದವು. ಈ ದತ್ತಾಂಶವನ್ನು ರಾಜ್ಯ ಹಂತದಲ್ಲಿ ಸರಿಪಡಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಜಿಲ್ಲೆಗಳಿಗೆ ದತ್ತಾಂಶವನ್ನು ಪರಿಶೀಲಿಸಿ ಸರಿಯಾದ ವಿಧಾನದಲ್ಲಿ ಮಾಹಿತಿಯನ್ನು ಕಳುಹಿಸುವ ಬಗ್ಗೆ ಮತ್ತೊಮ್ಮೆ ವಿಡಿಯೋ ಕಾನ್ಫರೆನ್ಸ್ ಮಾಡಲಾಯಿತು. ಅಂತಿಮವಾಗಿ ಜಿಲ್ಲೆಗಳಿಂದ ಬಂದ ದತ್ತಾಂಶದ ಆಧಾರದ ಮೇಲೆ 5 ಮತ್ತು 8ನೇ ತರಗತಿ ಮೌಲ್ಯಾಂಕನದ ಫಲಿತಾಂಶವನ್ನು ವಿಶ್ಲೇಷಣೆಗೊಳಪಡಿಸಲಾಯಿತು.


**ತರಗತಿವಾರು, ಲಿಂಗವಾರು ವಿದ್ಯಾರ್ಥಿಗಳ ಕಲಿಕಾ ಸಾಧನೆ:–**

**ಕೋಷ್ಟಕ – 3**

| ತರಗತಿ | ಶಾಲೆಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | | | CWSN ವಿದ್ಯಾರ್ಥಿಗಳ ಸಂಖ್ಯೆ | | | ಕಲಿಕಾ ಸಾಧನೆ (%) | | |
|---|---|---|---|---|---|---|---|---|---|---|
| | | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| 5 | 5689 | 40872 | 40073 | 80945 | 551 | 397 | 948 | 77 | 80 | 78 |
| 8 | 2582 | 41845 | 40543 | 82388 | 255 | 161 | 416 | 75 | 79 | 77 |

**ಕಲಿಕಾ ಸಾಧನೆ ಲೆಕ್ಕಾಚಾರದ ಸೂತ್ರ**

$$\text{Achievement (\%)} = \frac{\text{Total scored marks of students}}{\text{Total maximum marks} \times \text{total no. of students}} \times 100$$




5 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳ ಒಟ್ಟಾರೆ ಕಲಿಕಾ ಸಾಧನೆ ಗಮನಿಸಿದಾಗ 5ನೇ ತರಗತಿಯಲ್ಲಿ ಶೇ.78 ರಷ್ಟು ಕಲಿಕಾ ಸಾಧನೆಯಾಗಿದ್ದು, 8ನೇ ತರಗತಿಯಲ್ಲಿ ಶೇ.77 ರಷ್ಟು ಕಲಿಕಾ ಸಾಧನೆಯಾಗಿದೆ. ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಫಲಿತಾಂಶದಂತೆ 5 ಮತ್ತು 8ನೇ ತರಗತಿ ಮೌಲ್ಯಾಂಕನದಲ್ಲಿಯೂ ಬಾಲಕಿಯರ ಸಾಧನೆ ಉತ್ತಮವಾಗಿದೆ.

ಸಂಕಲನಾತ್ಮಕ ಮೌಲ್ಯಮಾಪನ–2 ರ ಪಠ್ಯವಸ್ತುವನ್ನು ಆಧರಿಸಿ, ಕಲಿಕಾ ಫಲಗಳ ಆಧಾರಿತವಾಗಿ ಪ್ರಶ್ನೆಪತ್ರಿಕೆಗಳನ್ನು ರಚಿಸಲಾಗಿತ್ತು. 5 ಮತ್ತು 8 ನೇ ತರಗತಿ ಮೌಲ್ಯಾಂಕನಕ್ಕೆ ಒಳಪಟ್ಟ ಸರ್ಕಾರಿ ಶಾಲೆಗಳಲ್ಲಿ ಆಯ್ದ ಸರ್ಕಾರಿ ಶಾಲೆಗಳಿಗೆ ರಾಜ್ಯ ಕಲಿಕಾ ಸಾಧನಾ ಸಮೀಕ್ಷೆಯನ್ನು 3, 5, 8, 9 ಮತ್ತು 10ನೇ ತರಗತಿಗಳಿಗೆ ನಡೆಸಲಾಗಿತ್ತು. ಈ ಸಮೀಕ್ಷೆಯಲ್ಲಿ 5 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳ ಕಲಿಕಾ ಸಾಧನೆಯನ್ನು ಗಮನಿಸಿದಾಗ ಕ್ರಮವಾಗಿ ಶೇ. 71 ಮತ್ತು ಶೇ. 51 ಇರುವುದು ಕಂಡುಬಂದಿದೆ. ಮೌಲ್ಯಾಂಕನ ಮತ್ತು ಸಮೀಕ್ಷೆಯ ಕಲಿಕಾ ಸಾಧನೆಯನ್ನು ತುಲನಾತ್ಮಕವಾಗಿ ವಿಶ್ಲೇಷಿಸಿದಾಗ 5ನೇ ತರಗತಿಯ ಮೌಲ್ಯಾಂಕನದಲ್ಲಿ ಶೇ.78 ರಷ್ಟು ಕಲಿಕಾ ಸಾಧನೆಯಿದ್ದು, ರಾಜ್ಯ ಕಲಿಕಾ ಸಾಧನಾ ಸಮೀಕ್ಷೆಯಲ್ಲಿ ಶೇ.71 ರಷ್ಟು ಕಲಿಕಾ ಸಾಧನೆಯಾಗಿದೆ. ಅಂದರೆ ಮೌಲ್ಯಾಂಕನ ಮತ್ತು ಸಮೀಕ್ಷೆ ನಡುವಿನ ಕಲಿಕಾ ಅಂತರದಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಇರುವುದಿಲ್ಲ. ಆದರೆ 8ನೇ ತರಗತಿಯ ಮೌಲ್ಯಾಂಕನದಲ್ಲಿ ಶೇ.77 ರಷ್ಟು ಕಲಿಕಾ ಸಾಧನೆಯಾಗಿದ್ದರೆ, ರಾಜ್ಯ ಕಲಿಕಾ ಸಾಧನಾ ಸಮೀಕ್ಷೆಯ ಕಲಿಕಾ ಸಾಧನೆ ಶೇ.51 ರಷ್ಟು ಮಾತ್ರ ಇದ್ದು, ಹೆಚ್ಚಿನ ವ್ಯತ್ಯಾಸ ಕಂಡುಬಂದಿದೆ. ಈ ಬಗ್ಗೆ ತುಲನಾತ್ಮಕವಾಗಿ ಅಧ್ಯಯನ ಮಾಡಬೇಕಾಗಿದೆ.

### ಸ್ಥಾನಿಕವಾರು ವಿದ್ಯಾರ್ಥಿಗಳ ಕಲಿಕಾ ಸಾಧನೆ:–

**ಕೋಷ್ಟಕ – 4**

| ತರಗತಿ | ಸ್ಥಾನಿಕ ವರ್ಗ | ಶಾಲೆಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | | | CWSN ವಿದ್ಯಾರ್ಥಿಗಳ ಸಂಖ್ಯೆ | | | ಕಲಿಕಾ ಸಾಧನೆ (%) | | |
|---|---|---|---|---|---|---|---|---|---|---|---|
| | | | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| 5ನೇ | ಗ್ರಾಮೀಣ | 4289 | 26632 | 26327 | 52959 | 397 | 299 | 696 | 79 | 81 | 80 |
| | ನಗರ | 1400 | 14240 | 13746 | 27986 | 154 | 98 | 252 | 74 | 77 | 76 |
| 8ನೇ | ಗ್ರಾಮೀಣ | 1520 | 24225 | 21814 | 46039 | 147 | 99 | 246 | 76 | 80 | 78 |
| | ನಗರ | 1062 | 17620 | 18729 | 36349 | 108 | 62 | 170 | 74 | 78 | 76 |





- 5 ಮತ್ತು 8ನೇ ತರಗತಿಯ ಗ್ರಾಮೀಣ ಮತ್ತು ನಗರ ಪ್ರದೇಶದ ಫಲಿತಾಂಶವನ್ನು ಗಮನಿಸಿದಾಗ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಸಾಧನೆ ಉತ್ತಮವಾಗಿದೆ. 5 ಮತ್ತು 8ನೇ ತರಗತಿ ವಿದ್ಯಾರ್ಥಿಗಳು ಕ್ರಮವಾಗಿ ಶೇ.80 ಮತ್ತು ಶೇ.78 ರಷ್ಟು ಕಲಿಕಾ ಸಾಧನೆ ಮಾಡಿದ್ದರೆ, ನಗರ ಪ್ರದೇಶದ ವಿದ್ಯಾರ್ಥಿಗಳು ಶೇ.76 ರಷ್ಟು ಸಾಧನೆ ಮಾಡಿರುತ್ತಾರೆ.
- ಎಲ್ಲಾ ಫಲಿತಾಂಶಗಳಂತೆ ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಸಾಧನೆ ಉತ್ತಮವಾಗಿದೆ.

**ಸಾಮಾಜಿಕ ವರ್ಗವಾರು ವಿದ್ಯಾರ್ಥಿಗಳ ಕಲಿಕಾ ಸಾಧನೆ:–**

**ಕೋಷ್ಟಕ – 5**

| ತರಗತಿ | ಸಾಮಾಜಿಕ ವರ್ಗ | ವಿದ್ಯಾರ್ಥಿಗಳ ಸಂಖ್ಯೆ | | | ಕಲಿಕಾ ಸಾಧನೆ (%) | | |
|---|---|---|---|---|---|---|---|
| | | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| 5ನೇ | ಸಾಮಾನ್ಯ ವರ್ಗ | 1707 | 1619 | 3326 | 76 | 78 | 77 |
| | ಅಲ್ಪಸಂಖ್ಯಾತ ವರ್ಗ | 5334 | 5096 | 10430 | 75 | 79 | 77 |
| | ಇತರೆ ಹಿಂದುಳಿದ ವರ್ಗ OBC) | 22386 | 21917 | 44303 | 78 | 80 | 79 |
| | ಪರಿಶಿಷ್ಟ ಜಾತಿ (SC) | 7956 | 8111 | 16067 | 77 | 79 | 78 |
| | ಪರಿಶಿಷ್ಟ ಪಂಗಡ (ST) | 3489 | 3330 | 6819 | 77 | 80 | 79 |
| 8ನೇ | ಸಾಮಾನ್ಯ ವರ್ಗ | 2051 | 1913 | 3964 | 76 | 79 | 78 |
| | ಅಲ್ಪಸಂಖ್ಯಾತ ವರ್ಗ | 4571 | 4968 | 9539 | 73 | 78 | 75 |
| | ಇತರೆ ಹಿಂದುಳಿದ ವರ್ಗ OBC) | 24064 | 22488 | 46552 | 76 | 80 | 78 |
| | ಪರಿಶಿಷ್ಟ ಜಾತಿ (SC) | 8013 | 7990 | 16003 | 74 | 78 | 76 |
| | ಪರಿಶಿಷ್ಟ ಪಂಗಡ (ST) | 3146 | 3184 | 6330 | 75 | 78 | 77 |




5 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳ ಮೌಲ್ಯಾಂಕನದ ಫಲಿತಾಂಶವನ್ನು ವರ್ಗವಾರು ವಿಶ್ಲೇಷಿಸಿದಾಗ 5 ನೇ ತರಗತಿಯಲ್ಲಿ ಇತರೆ ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಕಲಿಕಾ ಸಾಧನೆ ಶೇ.79 ರಷ್ಟಿದ್ದು, ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಕಲಿಕಾ ಸಾಧನೆ ಶೇ.78 ರಷ್ಟಿದೆ. ನಂತರದಲ್ಲಿ ಸಾಮಾನ್ಯ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗದವರಿದ್ದಾರೆ.

5ನೇ ತರಗತಿಯಲ್ಲಿ ಇತರೆ ಹಿಂದುಳಿದ ವರ್ಗ ಹಾಗೂ ಪರಿಶಿಷ್ಟ ಪಂಗಡದ ಬಾಲಕಿಯರು ಶೇ.80 ರಷ್ಟು ಕಲಿಕಾ ಸಾಧನೆ ಮಾಡಿದ್ದು, ಒಟ್ಟಾರೆಯಾಗಿ 5ನೇ ತರಗತಿಯಲ್ಲಿ ಬಾಲಕಿಯರ ಸಾಧನೆ ಬಾಲಕರಿಗಿಂತ ಉತ್ತಮವಾಗಿದೆ.


8ನೇ ತರಗತಿಯಲ್ಲಿ ಸಾಮಾನ್ಯ ವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಸಾಧನೆ ಶೇ. 78 ರಷ್ಟಿದ್ದು, ಉಳಿದ ವರ್ಗಗಳ ವಿದ್ಯಾರ್ಥಿಗಳಿಗಿಂತ ಉತ್ತಮ ಕಲಿಕಾ ಸಾಧನೆ ಮಾಡಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳಲ್ಲಿ ಕಲಿಕಾ ಸಾಧನೆಯಲ್ಲಿ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಕಲಿಕಾ ಸಾಧನೆ ಕಡಿಮೆಯಿದ್ದು, ವಿಶೇಷ ಗಮನಹರಿಸಬೇಕಿದೆ.

ಸಾಮಾಜಿಕ ವರ್ಗವಾರು ಬಾಲಕ, ಬಾಲಕಿಯರ ಕಲಿಕಾ ಸಾಧನೆ ಗಮನಿಸಿದಾಗ ಒಟ್ಟಾರೆಯಾಗಿ ಬಾಲಕಿಯರ ಕಲಿಕಾ ಸಾಧನೆ ಉತ್ತಮವಾಗಿದ್ದು, ಇತರೆ ಹಿಂದುಳಿದ ವರ್ಗದ ಬಾಲಕಿಯರ ಸಾಧನೆ ಉಳಿದ ಎಲ್ಲಾ ವರ್ಗದ ಬಾಲಕಿಯರ ಸಾಧನೆಗಿಂತ ಉತ್ತಮವಾಗಿದೆ. ಅಲ್ಪಸಂಖ್ಯಾತ ವರ್ಗ & ಪರಿಶಿಷ್ಟ ಜಾತಿಯ ಬಾಲಕರ ಸಾಧನೆ ಕಡಿಮೆಯಿದ್ದು, ಪ್ರತ್ಯೇಕ ಕ್ರಿಯಾಯೋಜನೆ ರೂಪಿಸಬೇಕಿದೆ.

## ಶಾಲಾ ಆಡಳಿತವಾರು ವಿದ್ಯಾರ್ಥಿಗಳ ಕಲಿಕಾ ಸಾಧನೆ:–

### ಕೋಷ್ಟಕ – 6

| ತರಗತಿ | ಶಾಲೆಯ ವಿಧ | ಶಾಲೆಗಳ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | | | ಕಲಿಕಾ ಸಾಧನೆ (%) | | |
|---|---|---|---|---|---|---|---|---|
| | | | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| 5ನೇ | ಸರ್ಕಾರಿ ಶಾಲೆಗಳು | 4158 | 21206 | 23283 | 44489 | 79 | 81 | 80 |
| | ಅನುದಾನಿತ ಶಾಲೆಗಳು | 261 | 2756 | 2636 | 5392 | 77 | 79 | 78 |
| | ಅನುದಾನರಹಿತ ಶಾಲೆಗಳು | 1270 | 16910 | 14154 | 31064 | 75 | 78 | 76 |
| 8ನೇ | ಸರ್ಕಾರಿ ಶಾಲೆಗಳು | 1211 | 18831 | 19787 | 38618 | 74 | 78 | 77 |
| | ಅನುದಾನಿತ ಶಾಲೆಗಳು | 446 | 9661 | 10200 | 19861 | 73 | 77 | 75 |
| | ಅನುದಾನರಹಿತ ಶಾಲೆಗಳು | 925 | 13353 | 10556 | 23909 | 79 | 82 | 80 |




2022–23 ನೇ ಸಾಲಿನ 5 ಮತ್ತು 8ನೇ ತರಗತಿಗಳ ಮೌಲ್ಯಾಂಕನವನ್ನು ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಿಗೆ ನಡೆಸಲಾಗಿತ್ತು. ಈ ಮೂರು ರೀತಿಯ ಶಾಲೆಗಳ ಕಲಿಕಾ ಸಾಧನೆಯನ್ನು ವಿಶ್ಲೇಷಣೆಗೊಳಪಡಿಸಿದಾಗ 5ನೇ ತರಗತಿಯಲ್ಲಿ ಸರ್ಕಾರಿ ಶಾಲೆಗಳು ಉಳಿದ ಶಾಲೆಗಳಿಗಿಂತ ಹೆಚ್ಚಿಗೆ ಕಲಿಕಾ ಸಾಧನೆ ಮಾಡಿದ್ದು, ಶೇ. 80 ರಷ್ಟಿದೆ. ಅನುದಾನಿತ ಮತ್ತು ಅನುದಾನರಹಿತ ಶಾಲೆಗಳು ಕ್ರಮವಾಗಿ ಶೇ.78 ಮತ್ತು ಶೇ.76 ಕಲಿಕಾ ಸಾಧನೆ ಮಾಡಿವೆ. 5ನೇ ತರಗತಿಯಲ್ಲಿ ಮೂರು ರೀತಿಯ ಶಾಲೆಗಳಲ್ಲಿ ಸರ್ಕಾರಿ ಶಾಲೆಗಳ ಬಾಲಕಿಯರ ಕಲಿಕಾ ಸಾಧನೆ ಉತ್ತಮವಾಗಿದ್ದು, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಬಾಲಕರ ಸಾಧನೆ ಕಡಿಮೆಯಿದೆ.

ಶಾಲಾ ವಿಧವಾರು 8ನೇ ತರಗತಿಯ ಫಲಿತಾಂಶವನ್ನು ಗಮನಿಸಿದಾಗ ಅನುದಾನರಹಿತ ಶಾಲೆಗಳ ಕಲಿಕಾ ಸಾಧನೆ ಉತ್ತಮವಾಗಿದ್ದು, ಶೇ.80 ರಷ್ಟಿದೆ. ಅನುದಾನಿತ ಮತ್ತು ಸರ್ಕಾರಿ ಶಾಲೆಗಳ ಸಾಧನೆ ಕ್ರಮವಾಗಿ ಶೇ.75 ಮತ್ತು ಶೇ.77 ರಷ್ಟಿದೆ. ಈ ತರಗತಿಯಲ್ಲಿಯೂ ಬಾಲಕಿಯರ ಸಾಧನೆ ಬಾಲಕರಿಗಿಂತ ಉತ್ತಮವಾಗಿದೆ.

## ಮಾಧ್ಯಮವಾರು, ವಿಷಯವಾರು ವಿದ್ಯಾರ್ಥಿಗಳ ಕಲಿಕಾ ಸಾಧನೆ:–

### ಕೋಷ್ಟಕ – 7(1)

| ಮಾಧ್ಯಮ | ಪ್ರಥಮ ಭಾಷೆ – ಕಲಿಕಾ ಸಾಧನೆ (%) | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | 5ನೇ ತರಗತಿ | | | | | | | | 8ನೇ ತರಗತಿ | | | | | | | | |
| | ಕನ್ನಡ | ಇಂಗ್ಲಿಷ್ | ಹಿಂದಿ | ಉರ್ದು | ತೆಲುಗು | ತಮಿಳು | ಮರಾಠಿ | ಒಟ್ಟು | ಕನ್ನಡ | ಇಂಗ್ಲಿಷ್ | ಹಿಂದಿ | ಉರ್ದು | ತೆಲುಗು | ತಮಿಳು | ಮರಾಠಿ | ಸಂಸ್ಕೃತ | ಒಟ್ಟು |
| ಇಂಗ್ಲಿಷ್ | 69 | 74 | - | 78 | - | - | 81 | **72** | 78 | 81 | 74 | 73 | - | 86 | - | 80 | **79** |
| ಹಿಂದಿ | - | - | 84 | - | - | - | - | **84** | - | - | 84 | - | - | - | - | - | **84** |
| ಕನ್ನಡ | 75 | - | - | - | - | - | - | **75** | 78 | - | 85 | - | - | - | - | 70 | **78** |
| ಮರಾಠಿ | - | - | - | - | - | - | 78 | **78** | - | - | - | - | - | - | 86 | - | **86** |
| ತಮಿಳು | - | - | - | - | - | 86 | - | **86** | - | - | - | - | - | - | - | - | - |
| ತೆಲುಗು | - | - | - | - | 76 | - | - | **76** | - | - | - | - | 80 | - | - | - | **80** |
| ಉರ್ದು | 87 | - | - | 82 | - | - | - | **82** | 90 | - | - | 81 | - | - | - | - | **81** |
| ಒಟ್ಟು | **74** | **74** | **84** | **81** | **76** | **86** | **78** | **74** | **78** | **81** | **78** | **80** | **80** | **86** | **86** | **77** | **78** |

5 ಮತ್ತು 8ನೇ ತರಗತಿಯ ಮೌಲ್ಯಾಂಕನದಲ್ಲಿ ವಿಷಯವಾರು, ಮಾಧ್ಯಮವಾರು ವಿದ್ಯಾರ್ಥಿಗಳ ಕಲಿಕಾ ಸಾಧನೆಯನ್ನು ವಿಶ್ಲೇಷಿಸಿದ್ದು, ಕೋಷ್ಟಕ 7(1) ರಲ್ಲಿ 5 ಮತ್ತು 8ನೇ ತರಗತಿಯ ಪ್ರಥಮ ಭಾಷೆ ಕಲಿಕಾ ಸಾಧನೆಯನ್ನು ತೋರಿಸಲಾಗಿದೆ.

5ನೇ ತರಗತಿಯ ಪ್ರಥಮ ಭಾಷೆಯಲ್ಲಿ ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ತೆಲಗು, ತಮಿಳು ಮತ್ತು ಮರಾಠಿ ವಿಷಯಗಳಿದ್ದು, ಒಟ್ಟಾರೆಯಾಗಿ ತಮಿಳು ಭಾಷೆಯಲ್ಲಿ ಶೇ.86 ರಷ್ಟು ಕಲಿಕಾ ಸಾಧನೆಯಾಗಿದ್ದು, ನಂತರದಲ್ಲಿ ಹಿಂದಿ ಭಾಷೆಯಲ್ಲಿ ವಿದ್ಯಾರ್ಥಿಗಳ ಪ್ರಥಮ ಭಾಷೆಯ ಕಲಿಕಾ ಸಾಧನೆ ಉತ್ತಮವಾಗಿದೆ.

8ನೇ ತರಗತಿಯ ಪ್ರಥಮ ಭಾಷೆಯಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ ಉರ್ದು, ತೆಲುಗು, ತಮಿಳು, ಮರಾಠಿ ಮತ್ತು ಸಂಸ್ಕೃತ ಸೇರಿ ಒಟ್ಟು 8 ವಿಷಯಗಳಿದ್ದು, ಶೇ 86 ರಷ್ಟು ಕಲಿಕಾ ಸಾಧನೆಯೊಂದಿಗೆ ತಮಿಳು ಮತ್ತು ಮರಾಠಿ ಮೊದಲ ಸ್ಥಾನದಲ್ಲಿದೆ. ಉಳಿದ ಎಲ್ಲಾ ಭಾಷೆಗಳಲ್ಲಿಯೂ ಶೇ. 77 ಕ್ಕಿಂತ ಹೆಚ್ಚಿನ ಕಲಿಕಾ ಸಾಧನೆ ಕಂಡುಬಂದಿದೆ.

**ಕೋಷ್ಟಕ – 7(2)**

| ಮಾಧ್ಯಮ | ದ್ವಿತೀಯ ಭಾಷೆ – ಕಲಿಕಾ ಸಾಧನೆ (%) | | | | | |
|---|---|---|---|---|---|---|
| | 5ನೇ ತರಗತಿ | | | 8ನೇ ತರಗತಿ | | |
| | ಕನ್ನಡ | ಇಂಗ್ಲಿಷ್ | ಒಟ್ಟು | ಕನ್ನಡ | ಇಂಗ್ಲಿಷ್ | ಒಟ್ಟು |
| ಇಂಗ್ಲಿಷ್ | 69 | 80 | **74** | 81 | 82 | **82** |
| ಹಿಂದಿ | - | 72 | **72** | 63 | - | **63** |
| ಕನ್ನಡ | 83 | 80 | **80** | 75 | 76 | **76** |
| ಮರಾಠಿ | 76 | 66 | **76** | 79 | 80 | **79** |
| ತಮಿಳು | 66 | 81 | **70** | - | - | - |
| ತೆಲುಗು | 87 | 72 | **77** | - | 80 | **80** |
| ಉರ್ದು | 79 | 86 | **80** | 81 | 78 | **80** |
| ಒಟ್ಟು | **71** | **80** | **78** | **81** | **78** | **78** |

5 ಮತ್ತು 8ನೇ ತರಗತಿಯಲ್ಲಿ ದ್ವಿತೀಯ ಭಾಷೆಯಲ್ಲಿ 2 ವಿಷಯಗಳಿದ್ದು, 5ನೇ ತರಗತಿಯಲ್ಲಿ ಇಂಗ್ಲಿಷ್ ವಿಷಯದ ಕಲಿಕಾ ಸಾಧನೆ ಶೇ 80 ರಷ್ಟಿದ್ದು, ಕನ್ನಡ ವಿಷಯದ ಕಲಿಕಾ ಸಾಧನೆ ಶೆ.71 ರಷ್ಟಿದೆ.

8ನೇ ತರಗತಿಯ ದ್ವಿತೀಯ ಭಾಷಾ ವಿಷಯಗಳನ್ನು ಪರಿಶೀಲಿಸಿದಾಗ ಕನ್ನಡ ವಿಷಯದ ಕಲಿಕಾ ಸಾಧನೆ ಶೇ.81 ರಷ್ಟಿದ್ದು, ಇಂಗ್ಲಿಷ್ ವಿಷಯದ ಕಲಿಕಾ ಸಾಧನೆ ಶೇ. 78 ರಷ್ಟಿದೆ.

**ಕೋಷ್ಟಕ – 7(3)**

| ಮಾಧ್ಯಮ | ತೃತೀಯ ಭಾಷೆ – ಕಲಿಕಾ ಸಾಧನೆ (%) | | | | | | | |
|---|---|---|---|---|---|---|---|---|
| | 8ನೇ ತರಗತಿ | | | | | | | |
| | ಕನ್ನಡ | ಇಂಗ್ಲಿಷ್ | ಹಿಂದಿ | ಉರ್ದು | ಸಂಸ್ಕೃತ | ತುಳು | ಕೊಂಕಣಿ | ಒಟ್ಟು |
| ಇಂಗ್ಲಿಷ್ | 80 | 84 | 84 | 78 | 75 | - | 74 | **84** |
| ಹಿಂದಿ | - | 65 | - | - | - | - | - | **65** |
| ಕನ್ನಡ | 81 | 86 | 80 | 80 | 77 | 79 | - | **80** |
| ಮರಾಠಿ | 86 | 82 | - | - | - | - | - | **82** |
| ತಮಿಳು | - | - | - | - | - | - | - | - |
| ತೆಲುಗು | 73 | - | - | - | - | - | - | **73** |
| ಉರ್ದು | 82 | 83 | 76 | - | - | - | - | **82** |
| ಒಟ್ಟು | **81** | **82** | **81** | **78** | **76** | **79** | **74** | **81** |

ಕೋಷ್ಟಕ 7(3) ರಲ್ಲಿ ತೃತೀಯ ಭಾಷಾ ವಿಷಯಗಳ ಕಲಿಕಾ ಸಾಧನೆಯನ್ನು ವಿಶ್ಲೇಷಿಸಿದ್ದು, ಇಂಗ್ಲಿಷ್ ಭಾಷೆಯಲ್ಲಿ ಶೇ.82 ರಷ್ಟು ಕಲಿಕಾ ಸಾಧನೆಯಾಗಿದ್ದು, ಕನ್ನಡ ಮತ್ತು ಹಿಂದಿ ತೃತೀಯ ಭಾಷಾ ವಿಷಯಗಳಲ್ಲಿ ಕಲಿಕಾ ಸಾಧನೆ ತಲಾ ಶೇ.81 ರಷ್ಟಿದೆ ಉಳಿದ ವಿಷಯಗಳಲ್ಲಿ ಕೊಂಕಣಿ ವಿಷಯ ಮಾತ್ರ ಶೇ. 74 ರಷ್ಟು ಕಲಿಕಾ ಸಾಧನೆಯೊಂದಿಗೆ ಕೊನೆಯ ಸ್ಥಾನದಲ್ಲಿದೆ.

### ಕೋಷ್ಟಕ – 7(4)


| ಮಾಧ್ಯಮ | ಕೋರ್ ವಿಷಯ – ಕಲಿಕಾ ಸಾಧನೆ (%) | | | | |
|---|---|---|---|---|---|
| | 5ನೇ ತರಗತಿ | | 8ನೇ ತರಗತಿ | | |
| | ಗಣಿತ | ಪರಿಸರ ಅಧ್ಯಯನ | ಗಣಿತ | ವಿಜ್ಞಾನ | ಸಮಾಜ ವಿಜ್ಞಾನ |
| ಇಂಗ್ಲಿಷ್ | 84 | 72 | 70 | 79 | 78 |
| ಹಿಂದಿ | 81 | 75 | 73 | 83 | 87 |
| ಕನ್ನಡ | 85 | 79 | 70 | 77 | 76 |
| ಮರಾಠಿ | 85 | 78 | 77 | 83 | 83 |
| ತಮಿಳು | 85 | 83 | – | – | – |
| ತೆಲುಗು | 85 | 80 | 72 | 68 | 67 |
| ಉರ್ದು | 85 | 81 | 75 | 80 | 79 |
| **ಒಟ್ಟು** | **85** | **77** | **70** | **78** | **77** |

ಕೋಷ್ಟಕ 7(4) ರಲ್ಲಿ 5 ಮತ್ತು 8ನೇ ತರಗತಿಯ ಕೋರ್ ವಿಷಯಗಳ ಕಲಿಕಾ ಸಾಧನೆಯನ್ನು ವಿವರಿಸಲಾಗಿದೆ. 5ನೇ ತರಗತಿಯಲ್ಲಿ ಗಣಿತ ವಿಷಯದಲ್ಲಿ ಶೇ.85 ರಷ್ಟು ಕಲಿಕಾ ಸಾಧನೆಯಾಗಿದ್ದು, ಪರಿಸರ ಅಧ್ಯಯನ ವಿಷಯದಲ್ಲಿ ಶೇ.77 ರಷ್ಟು ಕಲಿಕಾ ಸಾಧನೆಯಾಗಿದೆ.

8ನೇ ತರಗತಿಯಲ್ಲಿ ಮೂರು ಕೋರ್ ವಿಷಯಗಳಲ್ಲಿ ವಿಜ್ಞಾನ ವಿಷಯದಲ್ಲಿ ಶೇ.78 ರಷ್ಟು ಕಲಿಕಾ ಸಾಧನೆಯಾಗಿದ್ದು, ಸಮಾಜ ವಿಜ್ಞಾನ ವಿಷಯದಲ್ಲಿ ಕಲಿಕಾ ಸಾಧನೆ ಶೇ.77 ರಷ್ಟಿದ್ದು, ಗಣಿತ ವಿಷಯದಲ್ಲಿ ಶೇ.70 ರಷ್ಟು ಮಾತ್ರ ಕಲಿಕಾ ಸಾಧನೆಯಾಗಿದೆ. ಪ್ರೌಢಶಾಲಾ ವಿದ್ಯಾರ್ಥಿಗಳ ಗಣಿತ ವಿಷಯದ ವಿದ್ಯಾರ್ಥಿಗಳ ಕಲಿಕಾ ಸಾಧನೆ ಉತ್ತಮಗೊಳಿಸಲು ಮತ್ತಷ್ಟು ಕ್ರಿಯಾಯೋಜನೆ ರೂಪಿಸಬೇಕಿದೆ.

### ಕೋಷ್ಟಕ – 7(5)

| ಮಾಧ್ಯಮ | ಮಾಧ್ಯಮವಾರು ಒಟ್ಟಾರೆ ಕಲಿಕಾ ಸಾಧನೆ (%) | |
|---|---|---|
| | 5ನೇ ತರಗತಿ | 8ನೇ ತರಗತಿ |
| ಇಂಗ್ಲಿಷ್ | 75 | 78 |
| ಹಿಂದಿ | 78 | 76 |
| ಕನ್ನಡ | 80 | 76 |
| ಮರಾಠಿ | 80 | 82 |
| ತಮಿಳು | 81 | - |
| ತೆಲುಗು | 80 | 74 |
| ಉರ್ದು | 82 | 80 |
| ಒಟ್ಟು | 78 | 77 |




ಕೋಷ್ಟಕ 7(5) ರಲ್ಲಿ ತರಗತಿವಾರು ಮಾಧ್ಯಮವಾರು ವಿದ್ಯಾರ್ಥಿಗಳ ಕಲಿಕಾ ಸಾಧನೆಯನ್ನು ನೀಡಿದ್ದು, 5ನೇ ತರಗತಿಯಲ್ಲಿ ಇಂಗ್ಲಿಷ್ ಮತ್ತು ಹಿಂದಿ ಮಾಧ್ಯಮವನ್ನು ಹೊರತುಪಡಿಸಿ ಇತರ ಎಲ್ಲಾ ಮಾಧ್ಯಮದ (ಕನ್ನಡ, ಮರಾಠಿ, ತಮಿಳು, ತೆಲುಗು, ಉರ್ದು) ವಿದ್ಯಾರ್ಥಿಗಳ ಕಲಿಕಾ ಸಾಧನೆ ಶೇ.80ಕ್ಕಿಂತ ಹೆಚ್ಚಿದ್ದು 5ನೇ ತರಗತಿಯ ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳ ಕಲಿಕೆಯನ್ನು ಹೆಚ್ಚಿಸಲು ಮತ್ತಷ್ಟು ಸುಧಾರಣಾ ಕ್ರಮಗಳ ಅವಶ್ಯಕತೆಯಿದೆ.

8ನೇ ತರಗತಿಯಲ್ಲಿ ಉರ್ದು ಮತ್ತು ಮರಾಠಿ ಮಾಧ್ಯಮದ ವಿದ್ಯಾರ್ಥಿಗಳ ಕಲಿಕಾ ಸಾಧನೆ ಶೇ.80 ಕ್ಕಿಂತ ಹೆಚ್ಚಿದ್ದು ಉಳಿದ ಎಲ್ಲಾ ಮಾಧ್ಯಮದ ವಿದ್ಯಾರ್ಥಿಗಳ ಸಾಧನೆ ಶೇ.74 ಕ್ಕಿಂತ ಕಡಿಮೆಯಿದ್ದು, ತೆಲುಗು ಮಾಧ್ಯಮದ ವಿದ್ಯಾರ್ಥಿಗಳ ಕಲಿಕಾ ಸಾಧನೆ ಹೆಚ್ಚಳಕ್ಕೆ ವಿಶೇಷ ಕ್ರಮಗಳ ಅವಶ್ಯಕತೆಯಿದೆ.

**ತರಗತಿವಾರು – ವಿಷಯವಾರು ಒಟ್ಟಾರೆ ಕಲಿಕಾ ಸಾಧನೆ (%)**

**ಕೋಷ್ಟಕ – 7(6)**

| ತರಗತಿ | ಪ್ರಥಮ ಭಾಷೆ | ದ್ವಿತೀಯ ಭಾಷೆ | ತೃತೀಯ ಭಾಷೆ | ಗಣಿತ | ಪ.ಅ/ ವಿಜ್ಞಾನ | ಸಮಾಜ ವಿಜ್ಞಾನ | ಒಟ್ಟು |
|---|---|---|---|---|---|---|---|
| 5ನೇ | 74 | 78 | - | 85 | 77 | - | 78 |
| 8ನೇ | 78 | 78 | 81 | 70 | 78 | 77 | 77 |



